**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು**

**ಎಸ್.ಸಿ. ಕೇಸ್ ಸಂಃ110/2022**

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ನಂಜನಗೂಡು ಪಟ್ಟಣ ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

ಃ ವಿರುದ್ಧ ಃ

ಆರೋಪಿತರು ರಾಜೇಶ

**ದೋಷಾರೋಪಣೆ**

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್**, ನಾನು ಈ ಕೆಳಕಂಡ ಆರೋಪಿಯಾದ

ರಾಜೇಶ ಬಿನ್ ಮಹದೇವಯ್ಯ, 35 ವರ್ಷ. ವಾಸಃ ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಆರೋಪಿಯಾದ ನೀವು, ಕಸುವಿನಹಳ್ಳಿ ಗ್ರಾಮದ ಪುಟ್ಟಸಿದ್ದಯ್ಯರವರ ಮಗಳಾದ ಮೃತೆ ದೇವಿಕಾಳನ್ನು, 8 ವರ್ಷದ ಹಿಂದೆ ಮದುವೆ ಮಾಡಿಕೊಂಡಿದ್ದು, ನಿಮಗೆ 4 ವರ್ಷದ ಮಲ್ಲೇಶ ಹಾಗೂ 1 ವರ್ಷ 8 ತಿಂಗಳಿನ ಅಮೂಲ್ಯ ಎಂಬ ಇಬ್ಬರು ಮಕ್ಕಳಿದ್ದು, ಮತ್ತೆ ಮೃತೆ ದೇವಿಕಾ 5 ತಿಂಗಳ ಗರ್ಭಿಣಿಯಾಗಿದ್ದಾಗ, ನೀವು ಅವಳ ಮೇಲೆ ಅನುಮಾನಪಟ್ಟು, ಆಕೆಯ ಶೀಲವನ್ನು ಶಂಕಿಸಿ, ಗಲಾಟೆ ಮಾಡಿ ಆಕೆಯ ಮೇಲೆ ಹಲ್ಲೆ ಮಾಡುತ್ತಿದ್ದು, ದಿಃ 14.12.2021 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ದೇವಿಕಾಳನ್ನು ನಂಜನಗೂಡು ಪಟ್ಟಣದ ಆಸ್ಪತ್ರೆಗೆ ತೋರಿಸಿಕೊಂಡು ಬರುವುದಾಗಿ, ಇಬ್ಬರು ಮಕ್ಕಳು ಸಮೇತ ಆಕೆಯನ್ನು ಕಬಿನಿ ಹೊಳೆಯ ದಡದ ಬಳಿ ಕರೆದುಕೊಂಡು ಬಂದು, ರಾತ್ರಿ 7.30 ಗಂಟೆ ಸಮಯದಲ್ಲಿ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ, ದಡದಿಂದ ಮೆಟ್ಟಿಲುಗಳ ಮೂಲಕ ಆಕೆಯನ್ನು ಎಳೆದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿ, ಆಕೆಯ ಕೊಲೆ ಮಾಡಿದ್ದು, ಈ ಮೂಲಕ

ನೀವು ಭಾರತ ದಂಡ ಸಂಹಿತೆ ಕಲಂ 302 ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಆರೋಪಿಯಾದ ನೀವು, ನಿಮ್ಮ ಮಕ್ಕಳನ್ನು ಕೊಲೆ ಮಾಡುವ ಉದ್ದೇಶದಿಂದ, ಚಾಸಾ–2, 4 ವರ್ಷದ ಮಲ್ಲೇಶನನ್ನು ಕಬಿನಿ ಹೊಳೆಗೆ ಎಸೆದಿದ್ದು, ನಿಮ್ಮ ಕೃತ್ಯದಿಂದಾಗಿ ಚಾಸಾ–2 ರವರು ಸಾವನ್ನಪ್ಪಿದರೆ, ನೀವು ಕೊಲೆ ಅಪರಾಧಕ್ಕೆ ಹೊಣೆಗಾರರಾಗುತ್ತೀರಿ ಎಂಬ ಅರಿವು ಮತ್ತು ಉದ್ದೇಶವನ್ನಿಟ್ಟುಕೊಂಡು, ಆತನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ, ಕೊಲೆಗೆ ಪ್ರಯತ್ನಿಸಿದ್ದು, ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ 307 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್)**

ದಿಃ 13.07.2022

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

**<u>ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು</u>**

**<u>ಎಸ್.ಸಿ. ಕೇಸ್ ಸಂಃ110/2022</u>**

ಪಿರ್ಯಾದಿ ಃ ಕರ್ನಾಟಕ ರಾಜ್ಯ ಸರ್ಕಾರ
ನಜಂನಗೂಡು ಪಟ್ಟಣ ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

ಃ ವಿರುದ್ಧ ಃ

ಆರೋಪಿತರು ರಾಜೇಶ

**<u>ಃ ಆರೋಪಿಯ ಹೇಳಿಕೆ ಃ</u>**

**ಪ್ರಶ್ನೆಃ- 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?**

**ಉತ್ತರ ಃ**

**ಪ್ರಶ್ನೆಃ- 2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಕೇಳುತ್ತೀರೋ?**

**ಉತ್ತರ ಃ**

**(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಆತನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಆತ ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ-ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತೆಂದು ನಾನು ಈ ದಿನ ಅಂದರೆ, ದಿನಾಂಕ 13.07.2022 ರಂದು ದೃಢೀಕರಿಸುತ್ತೇನೆ)**

(ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್)
ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

ದಿಃ **13.07.2022**